ಶ್ರೀ ಟಿ. ಚನ್ನಯ್ಯ.—ಅದಕ್ಕೆ ಎರಡು ಕಾರಣಗಳನ್ನು ಕೊಟ್ಟಿದೆ. Where they are particularly reserved for growing trees and where they are contiguous to other numbers having a large number of date trees.

ಶ್ರೀ ಎಚ್. ಕೆ. ಸಿದ್ದಯ್ಯ.—ಅದರೂ ಸಾಗುವಳಿಗೆ ಕೊಡಬೇಕೆಂದು ತಿಳಿಸಿರುವ ಸಂದರ್ಭಗಳಲ್ಲಿ ಸಹ ಈ ದಿನದವರೆಗೂ ಎಕ್ಸೈಜ್ ಇಲಾಖೆಯವರು ಏರೇ ಮಾಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ; ಬಂದರೆ ವಿಚಾರಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಕಡೂರು ತಾಲ್ಲೂಕಿನ ಸರ್ವೆ ನಂಬರು 62ರ ವಿಚಾರದಲ್ಲಿ ಹೀಗಾಗಿದೆ; ಇದನ್ನು ವಿಚಾರಿಸುತ್ತಿರಾ?

ಶ್ರೀ ಟಿ. ಚನ್ನಯ್ಯ.—ವಿಚಾರಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಪ್ರತಿ ವರ್ಷವೂ ಎಕ್ಸೈಜ್ ಇಲಾಖೆಯವರು ಇಷ್ಟು ಎಕರೆ ಜಮೀನನ್ನು ಸಾಗುವಳಿಗೆ release ಮಾಡಬಹುದೆಂದು ಸರ್ಕಾರಕ್ಕೆ ವರದಿ ಕಳುಹಿಸುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ರೆವೆನ್ಯೂ ಇಲಾಖೆಯಿಂದ ಸರ್ಕಾರಕ್ಕೆ ಈ ವಿಚಾರದಲ್ಲಿ ವರದಿ ಬರುತ್ತದೆ.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ತಾಲ್ಲೂಕಿನಲ್ಲಿ ನಾಲ್ಕು ಸಾವಿರ ಎಕರೆಯಷ್ಟನ್ನು ಸಾಗುವಳಿಗಾಗಿ release ಮಾಡಬಹುದೆಂದು ರೆವೆನ್ಯೂ ಇಲಾಖೆಯಿಂದ ಸರ್ಕಾರಕ್ಕೆ ಶಿಫಾರ್ಸು ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಬಂದರೆ release ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪರಿಶೀಲಿಸುತ್ತೇವೆ.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯಲ್ಲಿ date reserve ಬಗ್ಗೆ ಸಾಗುವಳಿಗೆ ಎಷ್ಟು ಎಕರೆ ಕೊಡಬಹುದೆಂಬ ಬಗ್ಗೆ ಡೆಪ್ಯುಟಿ ಕಮಿಷನರು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಕಳುಹಿಸಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅವರಿಂದ ಎಕ್ಸೈಜ್ ಕಮಿಷನರಿಗೆ ಹೋಗಿ, ಅಲ್ಲಿಂದ ಸರ್ಕಾರಕ್ಕೆ ಬರಬೇಕು. ಈ ವಿಚಾರದಲ್ಲಿ ನೇರವಾಗಿ ಡೆಪ್ಯುಟಿ ಕಮಿಷನರಿಂದಲೇ ಬರುವುದಿಲ್ಲ.

ಶ್ರೀ ಎ. ಮುನಿಯಪ್ಪ.—ರೆವೆನ್ಯೂ ಕಮಿಷನರು ಮತ್ತು ಡೆಪ್ಯುಟಿ ಕಮಿಷನರು ಸಹ ಈ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಮೂರು ಸಾವಿರ ಎಕರೆಯಷ್ಟು release ಮಾಡಬಹುದೆಂದು ಶಿಫಾರ್ಸು ಮಾಡಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಶಿಫಾರ್ಸು ಸರ್ಕಾರಕ್ಕೆ ಬಂದಿರುವುದು ಜ್ಞಾಪಕವಿಲ್ಲ.

Police Raid on Toddy Shop at Hanumanthapura.

Q.—680. Sri S. KARIAPPA (Virupakshapura).—

Will the Government be pleased to state :—

(*a*) whether the police of Harohalli, Kanakapura Taluk, raided an unauthorised toddy shop a few months ago, at Hanumanthapura near Maralavadi;

(*b*) how many times it was raided and the dates;

(*c*) whether those cases were charge-sheeted;

(*d*) whether that unauthorised shop was subsequently authorised;

(*e*) if so, when?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) Four times—

on 28th August 1953
on 29th August 1953
on 31st August 1953
on 26th September 1953

(*c*) No. As the offence was found, after investigation, to be of a technical nature, falling under the "Breach of Licence Conditions" under the Mysore Excise Act, the first three cases were disposed of departmentally by levying a fine of Rs. 5 on the Contractor, in each case and the remaining case is under investigation.

(*d*) The toddy shop of Thokasandra was permitted to be shifted to Hanumanthapura.

(*e*) 15th December 1953.

1 P.M.

ಶ್ರೀ ಎಸ್. ಕರಿಯಪ್ಪ.—ಈ ಕೇಸುಗಳನ್ನೆಲ್ಲಾ ಎಕ್ಸೈಜ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರು ಪೋಲೀಸ್‌ನವರಿಗೆ ಚಾರ್ಜ್‌ಷೀಟ್ ಹಾಕಿ ಎಂದು ಹೇಳಿ ವಹಿಸಿಕೊಟ್ಟರೆ?

ಶ್ರೀ ಟಿ. ಚನ್ನಯ್ಯ.—ಯಾರು ಯಾರಿಗೆ ವಹಿಸಿಕೊಟ್ಟಿದ್ದಾರೆ ಎಂಬ ರಿಪೋರ್ಟು ನಮಗೆ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಸಾಮಾನ್ಯವಾಗಿ ಪೋಲೀಸಿನವರು ಎಕ್ಸೈಜ್ ಕೇಸುಗಳನ್ನು ಹಿಡಿದು ಅವನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳಿಗೆ ವಹಿಸಿಕೊಟ್ಟು ಅವರು ಕೇಸು ಹಾಕುವುದು ಸಂಪ್ರದಾಯ, ಪ್ರೊಸೀಜರ್ ಅಲ್ಲವೇ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಕರಿಯಪ್ಪ.—ಆ ಪ್ರೊಸೀಜರನ್ನು ಇಲ್ಲೂ ಕೂಡ ಅನುಸರಿಸಿದ್ದಾರೆಯೇ ಇಲ್ಲವೇ?

Sri T. CHANNIAH.—I believe so.

ಶ್ರೀ ಎಸ್. ಕರಿಯಪ್ಪ.—ಅಲ್ಲಿನ ಎಕ್ಸೈಜ್ ಇನ್‌ಸ್ಪೆಕ್ಟರು ಕಂಟ್ರಾಕ್ಟರುಗಳ ಕೂಡ ಸೇರಿಕೊಂಡು ಆ ರೀತಿ ನಡೆಸುವುದಕ್ಕೆ ಅವಕಾಶ ಕೊಟ್ಟಿದ್ದಾರೆ ಎಂದು ಹೇಳಿ ಅವರ ಮೇಲೆ ಸರ್ಕಾರದವರಿಗೆ ಆಕ್ಷೇಪಣೆಗಳು ಬಂದಿರಲಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರಿಗೆ ಯಾವುದೂ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಆ ರೀತಿ ಏನಾದರೂ ಆಗಿದ್ದರೆ ಕ್ರಮ ಜರುಗಿಸುತ್ತೀರಾ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಎಕ್ಸೈಜ್ ಕಮೀಷನರು ಅದನ್ನು ಎಕ್ಸ್‌ಪೈರ್ ಮಾಡಬೇಕು.

ಶ್ರೀ ಎಸ್. ಕರಿಯಪ್ಪ.—ಮದರಾಸು ಪ್ರಾಂತ್ಯದಲ್ಲಿ ಪಾನನಿರೋಧ ಜಾರಿಗೆ ಬಂದ ಮೇಲೆ ಹನುಮಂತಪುರ ಎಂಬುದನ್ನು ಡ್ರೈಬೆಲ್ಟ್ ಆಗಿ ಪರಿಗಣಿಸಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹನುಮಂತಪುರ ಎಂಬುದು ಡ್ರೈಬೆಲ್ಟ್‌ಗೆ 2 ಅಥವಾ 3 ಮೈಲಿ ಆಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಮೊದಲು ತೋಕಸಂದ್ರದಲ್ಲೇ ಅಂಗಡಿಯನ್ನು ನಡೆಸುವುದಕ್ಕೆ ಅವಕಾಶ ಕೊಟ್ಟಿದ್ದರಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಕರಿಯಪ್ಪ.—ತೋಕಸಂದ್ರದಿಂದ ತೆಗೆದು ಹನುಮಂತಪುರದಲ್ಲಿ ಇದಲು ಅವಕಾಶ ಕೊಡುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ತೋಕಸಂದ್ರಗ್ರಾಮ ಬಹಳ ಚಿಕ್ಕಗ್ರಾಮ ಮತ್ತು ಅಲ್ಲಿ ಸೇಲ್ಸ್ ಬಹಳ ಕಡಿಮೆ ಆಗಿದೆ ಎಂದು ಅಲ್ಲಿನ ಏಜೆಂಟು ಅಪ್ಲಿಕೇಷ್ಷ ಹಾಕಿ ಕೊಂಡಿದ್ದರು. ಆದ್ದರಿಂದ ಅನುಮತಿ ಕೊಡಲಾಯಿತು. ಅಲ್ಲಿ ಅವರು ಅಂಗಡಿ ತೆಗೆದರು.

ಶ್ರೀ ಎಸ್. ಕರಿಯಪ್ಪ.—ಹಾಗಲ್ಲದೆ ಎಷ್ಟು ಸಾರಿ ಹೇಳಿದರೂ ಕೇಳದೆ, ಕೇಸ್ ಹಾಕಿದರೂ ಕೂಡ ಬಿಡದೇ ಇದ್ದುದರಿಂದ ಅಲ್ಲೇ ಇದ್ದುಕೊಂಡು ಹೋಗಲಿ ಎಂದು ಸರ್ಕಾರದವರು ಅಂಗಡಿ ಇಡುವುದಕ್ಕೆ ಲೈಸೆನ್ಸ್ ಕೊಟ್ಟರೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ. ತೋಕಸಂದ್ರದಲ್ಲಿ ಸೇಲ್ಸ್ ಸರಿಯಾಗಿ ಆಗುವುದಿಲ್ಲ, ಎಂದು ಹೇಳಿ ಆ ಏಜೆಂಟರು ಎಕ್ಸೈಜ್ ಕಮೀಷನರು ಮತ್ತು ಡೆಪ್ಯುಟಿ ಕಮೀಷನರಿಗೆ ಅಪ್ಲಿಕೇಷ್ಷ ಕೊಟ್ಟರು. ಅನಂತರ ಹನುಮಂತಪುರಕ್ಕೆ ಬದಲಾವಣೆ ಮಾಡಲು ಅನುಮತಿ ಕೊಡಲಾಯಿತು.

ಶ್ರೀ ಎಸ್. ಕರಿಯಪ್ಪ.—ಅವರು ಕಾನೂನಿಗೆ ವಿರೋಧವಾಗಿ ಆ ಸ್ಥಳದಲ್ಲಿ ಅಂಗಡಿ ಇಟ್ಟು ವ್ಯಾಪಾರ ಮಾಡುತ್ತಿದ್ದರೆ ಅದೇ ಸ್ಥಳದಲ್ಲಿ ಇಡುವುದಕ್ಕೆ ಲೈಸೆನ್ಸ್ ಕೊಡುವುದು ಸರಿಯಲ್ಲ ಎಂದು ಸರ್ಕಾರದವರಿಗೆ ತಿಳಿದು ಬರಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಈ ಸಂದರ್ಭದಲ್ಲಿ ಅಂಥ ಯಾವುದೂ ಬಲವತ್ತರವಾದ ಕಾರಣ ಕಂಡುಬರಲಿಲ್ಲ. ಕಾನೂನಿಗೆ ವಿರುದ್ಧವಾಗಿ ನಡೆಸುತ್ತಿರುವುದು ಕಂಡು ಬಂದಲ್ಲಿ ಸರ್ಕಾರದವರು ಸೂಕ್ತ ಕ್ರಮ ಕೈಕೊಳ್ಳುತ್ತಾರೆ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ನಾಲ್ಕುಸಾರಿ ಆ ರೀತಿ ಕಾನೂನಿಗೆ ವಿರುದ್ಧವಾಗಿ ಅಂಗಡಿ ನಡೆಸಿದ್ದು ಅಸೂಕ್ತವಾದದ್ದು ಎಂದು ಸರ್ಕಾರದವರಿಗೆ ತೋರಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಈಗ ನಡೆದಿರತಕ್ಕಂಥ ರೀತಿಯಲ್ಲಿ ಅಷ್ಟು ಸೀರಿಯಸ್ ಆಗಿ ತೆಗೆದುಕೊಳ್ಳಬೇಕಾಗಿಲ್ಲವೆಂದು ವರದಿಬಂದಿದೆ.

ಶ್ರೀ ಎಸ್. ಕರಿಯಪ್ಪ.—ಎಕ್ಸೈಜ್ ಆಕ್ಟಿನ ಮೇರೆಗೆ "ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸುವುದಕ್ಕೆ ಸಂಬಂಧಪಟ್ಟ" ಬಾಬಿನಲ್ಲಿ—ಕಂಡಿಷ್ಷನ್‌ಗೆ ವಿರೋಧಿಸಿ ಹೋದರು ಎಂದು ಹೇಳಿದ್ದೀರಿ. ಆ ರೀತಿ ಯಾವ ಕಂಡೀಷ್ಷ impose ಮಾಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ತೋಕಸಂದ್ರದಿಂದ ಹನುಮಂತಪುರಕ್ಕೆ unauthorised ಆಗಿ ಬದಲಾಯಿಸಿ ಲೈಸೆನ್ಸ್‌ಗೆ ವಿರೋಧವಾಗಿ ನಡೆದದ್ದರಿಂದ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲಾಯಿತು.

ಶ್ರೀ ಎಸ್. ಕರಿಯಪ್ಪ.—ಹಿಂದೆ ಯಾರಾದರೂ ಬಂದು ಅಲ್ಲಿ ಅಂಗಡಿ ಇಡುವುದಕ್ಕೆ ನಮಗೆ ಲೈಸೆನ್ಸ್ ಕೊಡಿ ಎಂದು ಮನವಿ ಮಾಡಿಕೊಂಡರೆ ?

ಶ್ರೀ ಟಿ. ಚನ್ನಯ್ಯ.—ಬೇರೆ ಯಾರೂ ಬಂದಿಲ್ಲ. ಈ ಏಜೆಂಟರೇ ಒಂದು ಅಪ್ಲಿಕೇಷ್ಷ ಹಾಕಿ ಹನುಮಂತಪುರದಲ್ಲಿ ನಡೆಸುವುದಕ್ಕೆ ಅವಕಾಶ ಕೊಡಬೇಕೆಂಬುದಾಗಿ ಕೇಳಿಕೊಂಡಿದ್ದರು. ಅದರಮೇಲೆ ಮಂಜೂರುಮಾಡಿದ್ದೇವೆ.

Officials of K.G.F. Sanitary Board (Transfer)

Q.—888. Sri K. S. VASAN (Kolar Gold Fields).—

Will the Government be pleased to state :—

(*a*) if they have not received representations from various sections of the public urging the immediate transfer of such officials of the Kolar Gold Fields Sanitary Board who have put in more than three years' service in the Board ;

(*b*) the names and designations of the officials who have put in more than three years' service in the Board ;

(*c*) the action they propose to take on the representations received in this respect ?

A.—Sri T. CHANNIAH (Minister for Public Health and Local Self-Government).

(*a*) Yes.

(*b*) Statement appended.

(*c*) The Deputy Commissioner, Kolar, has already effected the transfer of 10 officials and some more have been transferred from the Sanitary Board and the transfers are being given effect to. Some of them have themselves asked for transfers but for want of suitable places, it has not been possible to effect the transfers.

Action is being taken to effect the transfers of the officials as early as practicable.